ಶ್ರೀ ಗ.ವಿ.ವ.ಟ್ರಸ್ಟಿನ,

# ಶ್ರೀ ಗವಿಸಿದ್ಧೇಶ್ವರ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಕೊಪ್ಪಳ

ದಿನಾಂಕ: 28.04.2026

## ಸೂಚನೆ

ಈ ಮೂಲಕ ಮಹಾವಿದ್ಯಾಲಯದ ಬಿ.ಎ., ಬಿ.ಕಾಮ್, ಬಿ.ಎಸ್ಸಿ ಮತ್ತು ಬಿಸಿಎ 2, 4 ಸೆಮಿಸ್ಟರ್ (Regular/Repeater), 5 ಸೆಮಿಸ್ಟರ್ (Repeater) ಮತ್ತು 6ನೇ ಸೆಮಿಸ್ಟರ್ (Regular) ವಿದ್ಯಾರ್ಥಿಗಳಿಗೆ ತಿಳಿಸುವುದೇನೆಂದರೆ, ಜೂನ್/ಜುಲೈ–2026ರ ತಿಂಗಳಲ್ಲಿ ಜರುಗಲಿರುವ ಬಿ.ಎ., ಬಿ.ಕಾಮ್, ಬಿ.ಎಸ್ಸಿ ಮತ್ತು ಬಿಸಿಎ 2, 4, 5 ಮತ್ತು 6ನೇ ಸೆಮಿಸ್ಟರ್ (ರೆಗ್ಯೂಲರ್/ರಿಪೀಟರ್ಸ್) ತರಗತಿಗಳ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ, ಶುಲ್ಕ ಪಾವತಿಸುವ ದಿನಾಂಕಗಳು ಈ ಕೆಳಗಿನಂತಿವೆ.

| ಕ್ರ.ಸಂ. | ವಿವರ | ದಿನಾಂಕಗಳು |
|---|---|---|
| 1 | ದಂಡ ಶುಲ್ಕ ರಹಿತ | 28.04.2026 ರಿಂದ 07.05.2026 ವರೆಗೆ |
| 2 | ದಂಡ ಶುಲ್ಕ ರೂ. 200/- ರಂತೆ | 08.05.2026 ರಿಂದ 11.05.2026 ವರೆಗೆ |
| 3 | ದಂಡ ಶುಲ್ಕ ರೂ. 500/- ರಂತೆ | 12.05.2026 ರಿಂದ 14.05.2026 ವರೆಗೆ |

**ವಿಶೇಷ ಸೂಚನೆಗಳು:**

1. ವಿದ್ಯಾರ್ಥಿಗಳು ತಮ್ಮ UUCMS ಲಾಗಿನ್ ಮೂಲಕ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
2. 2, 4 ಮತ್ತು 6ನೇ ಸೆಮಿಸ್ಟರಿಗೆ ಕೋರ್ಸ ರಜಿಸ್ಟ್ರೇಷನ್ ಮಾಡಿರುವ ಮತ್ತು ಪ್ರಾಚಾರ್ಯರ ಅನುಮೋದನೆಗೊಂಡಿರುವ ವಿದ್ಯಾರ್ಥಿಗಳು ಮಾತ್ರ ಪರೀಕ್ಷಾ ಅರ್ಜಿ ತುಂಬಲು ಅರ್ಹರಿರುತ್ತಾರೆ.
3. ಇದುವರೆಗೂ ಕೋರ್ಸ ರಜಿಸ್ಟ್ರೇಷನ್ ಮಾಡದಿರುವ ವಿದ್ಯಾರ್ಥಿಗಳು ಕೋರ್ಸ ರಜಿಸ್ಟ್ರೇಷನ್ ಮಾಡಿಕೊಳ್ಳಬೇಕು. ಮುಂದುವರೆದು, ಪ್ರಾಚಾರ್ಯರ ಅನುಮೋದನೆಯ ನಂತರ ಪರೀಕ್ಷಾ ಅರ್ಜಿ ಸಲ್ಲಿಸಬಹುದು.
4. ತರಗತಿವಾರು ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕ ಇತ್ಯಾದಿಗಳ ವಿವರಗಳನ್ನು ಕೊಪ್ಪಳ ವಿಶ್ವವಿದ್ಯಾಲಯದ ವಿವರವಾದ ಸೂಚನೆಯಲ್ಲಿ ತಿಳಿಯಬಹುದು.

Principal
S.G.V.V.T's
Sri Gavisiddheshwar Arts,
Science & Commerce Degree
College, Koppal. (Dist: Koppal)

**ಸಂಖ್ಯೆ:**ಕೊ.ವಿ.ವಿ/ಸ್ನಾತಕ/ಪರೀಕ್ಷಾ.ಶುಲ್ಕ/2026–27/11 **ದಿನಾಂಕ:27.04.2026**

# ಪರೀಕ್ಷಾ ಶುಲ್ಕ ಅಧಿಸೂಚನೆ

**ವಿಷಯ:** ಜೂನ್/ ಜುಲೈ–2026ರ ತಿಂಗಳಿನಲ್ಲಿ ಜರುಗಲಿರುವ ಸ್ನಾತಕ ಪದವಿಯ 2ನೇ ಸೆಮಿಸ್ಟರ್ (Regular/Repeater) 4ನೇ ಸೆಮಿಸ್ಟರ್‌ನ (Regular/Repeater) ಮತ್ತು 5ನೇ ಸೆಮಿಸ್ಟರ್ (Repeater) ಹಾಗೂ 6ನೇ ಸೆಮಿಸ್ಟರ್ (Regular) ವಿದ್ಯಾರ್ಥಿಗಳ ಲಿಖಿತ/ಪ್ರಾಯೋಗಿಕ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ **ದಿನಾಂಕ:** 27.04.2026

*****

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಜೂನ್/ ಜುಲೈ–2026ರ ತಿಂಗಳಿನಲ್ಲಿ ಜರುಗಲಿರುವ ಸ್ನಾತಕ ಪದವಿಯ 2ನೇ ಸೆಮಿಸ್ಟರ್‌ನ (Regular/Repeater), 4ನೇ ಸೆಮಿಸ್ಟರ್‌ನ (Regular/Repeater) ಮತ್ತು 5ನೇ ಸೆಮಿಸ್ಟರ್‌ನ (Repeater) ಹಾಗೂ 6ನೇ ಸೆಮಿಸ್ಟರ್‌ನ (Regular) ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿ ಸಲ್ಲಿಸುವ, ಶುಲ್ಕ ಪಾವತಿಸುವ ದಿನಾಂಕಗಳು ಈ ಕೆಳಗಿನಂತಿವೆ.

**ಅರ್ಜಿ (ಶುಲ್ಕ ಪಾವತಿಸಲು) ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕಗಳ ಕುರಿತು.**

| ಕ್ರ.ಸಂ | ವಿವರ | ದಿನಾಂಕಗಳು |
|---|---|---|
| 01 | ದಂಡ ಶುಲ್ಕ ರಹಿತ | 28.04.2026 ರಿಂದ 07.05.2026 |
| 02 | ದಂಡ ಶುಲ್ಕ ರೂ. 200/– ರಂತೆ | 08.05.2026 ರಿಂದ 11.05.2026 |
| 03 | ದಂಡ ಶುಲ್ಕ ರೂ. 500/– ರಂತೆ | 12.05.2026 ರಿಂದ 14.05.2026 |

**ವಿವಿಧ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಶುಲ್ಕದ ವಿವರ**

| ಕ್ರ.ಸಂ | ವಿವರಣೆ | ಬಿ.ಎ/ಬಿ.ಕಾಂ | ಬಿ.ಎಸ್ಸಿ | ಬಿಬಿಎ/ಬಿಸಿಎ |
|---|---|---|---|---|
| 01. | **ಪ್ರತಿ ಸೆಮಿಸ್ಟರ್‌ಗೆ ಪರೀಕ್ಷಾ ಶುಲ್ಕ** | ರೂ.1200=00 | ರೂ.1500=00 | ರೂ.1400=00 |
| 02. | **ಒಂದು ವಿಷಯಕ್ಕೆ (ಪುನರಾವರ್ತಿತ ವಿದ್ಯಾರ್ಥಿಗಳಿಗೆ)** | ರೂ.260=00 | ರೂ.260=00 | ರೂ.260=00 |
| 03. | **ಎರಡಕ್ಕಿಂತ ಹೆಚ್ಚು ವಿಷಯಗಳಿಗೆ (ಪುನರಾವರ್ತಿತ ವಿದ್ಯಾರ್ಥಿಗಳಿಗೆ)** | ರೂ.1200=00 | ರೂ.1500=00 | ರೂ.1400=00 |
| 04. | **ಪ್ರಾಯೋಗಿಕ ಪರೀಕ್ಷೆಯ ಪ್ರತಿ ವಿಷಯಕ್ಕೆ (ಪುನರಾವರ್ತಿತ ವಿದ್ಯಾರ್ಥಿಗಳಿಗೆ)** | ರೂ.140=00 | ರೂ.140=00 | ರೂ.140=00 |
| 05. | **ಅಂಕಪಟ್ಟಿ ಶುಲ್ಕ ಪ್ರತಿ ಸೆಮಿಸ್ಟರ್‌ಗೆ** | ರೂ.242=00 | ರೂ.242=00 | ರೂ.242=00 |

ಈ ಪರೀಕ್ಷೆಗಳಿಗೆ ನಿಯಮಾನುಸಾರ ಅರ್ಹರಾದ ವಿದ್ಯಾರ್ಥಿಗಳು ಅರ್ಜಿಯನ್ನು ಭರಿಸಲು Online ಮೂಲಕ ಮಾತ್ರ ಅವಕಾಶವಿರುತ್ತದೆ. ವಿಶ್ವವಿದ್ಯಾಲಯವು ನೇರವಾಗಿ ಅರ್ಜಿಗಳನ್ನು ತೆಗೆದುಕೊಳ್ಳುವುದಿಲ್ಲ.

**ಎಲ್ಲಾ ಮಹಾವಿದ್ಯಾಲಯಗಳ ಪ್ರಾಂಶುಪಾಲರು/ವಿಭಾಗಗಳ ಮುಖ್ಯಸ್ಥರು/ವಿದ್ಯಾರ್ಥಿಗಳಿಗೆ ಸೂಚನೆಗಳು:**

1. ವಿದ್ಯಾರ್ಥಿಗಳು UUCMS ಆನ್ ಲೈನ್ (Online) ಮುಖಾಂತರ ಅರ್ಜಿ ಭರಿಸಿ, ಶುಲ್ಕ ಸಂದಾಯಿಸಿದ ನಂತರ ಪ್ರತಿಯನ್ನು ತಕ್ಷಣ ವಿದ್ಯಾರ್ಥಿಗಳು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು /ಮಹಾವಿದ್ಯಾಲಯಗಳಲ್ಲಿ ಸಲ್ಲಿಸಬೇಕು.
2. SC/ST ಹಾಗೂ OBC ಅಭ್ಯರ್ಥಿಗಳು ಹಾಗೂ ಸರ್ಕಾರಿ ಆದೇಶಗಳನ್ವಯ ವಾರ್ಷಿಕ ಆದಾಯದ ಮಿತಿಯೊಳಗೆ ಬರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ DBT ಮೂಲಕ ಪಡೆಯುವುದರಿಂದ ಶುಲ್ಕ ವಿನಾಯಿತಿ ಇರುವುದಿಲ್ಲ. ಕಾರಣ ಅವರುಗಳು ಪೂರ್ಣ ಶುಲ್ಕವನ್ನು ಪಾವತಿಸತಕ್ಕದ್ದು.
3. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ತಮ್ಮ ನೋಂದಣಿ ಸಂಖ್ಯೆಯನ್ನು ಬಿಟ್ಟು ಬೇರೆ ನೋಂದಣಿ ಸಂಖ್ಯೆ ಅಥವಾ ಬೇರೆ ವಿಷಯಗಳನ್ನು ನಮೂದಿಸಿದರೆ ಅಂತಹ ಪ್ರಕರಣಗಳನ್ನು ವಿಶ್ವವಿದ್ಯಾಲಯವು ಸರಿಪಡಿಸಲಾಗುವುದಿಲ್ಲ.
4. ಪರೀಕ್ಷಾ ಶುಲ್ಕವನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಗಳನ್ನು ಯಾವದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ. ಮತ್ತು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ಕುಲಸಚಿವರು(ಮೌಲ್ಯಮಾಪನ)**
**ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ.**

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ. ರವರಿಗೆ ಮಾಹಿತಿಗಾಗಿ.
2. ಕುಲಸಚಿವರು, ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ. ರವರಿಗೆ ಮಾಹಿತಿಗಾಗಿ.
3. ಹಣಕಾಸು ಅಧಿಕಾರಿಗಳು ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ. ರವರಿಗೆ ಮಾಹಿತಿಗಾಗಿ.
4. ನಿರ್ದೇಶಕರು, UUCMS ವಿಭಾಗ, ಬೆಂಗಳೂರು. ರವರ ಮಾಹಿತಿಗಾಗಿ.
5. ಪ್ರಾಂಶುಪಾಲರು, ಕೊಪ್ಪಳ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲಾ ಸ್ನಾತಕ ಮಹಾವಿದ್ಯಾಲಯಗಳು.
6. ಕಛೇರಿ ಪ್ರತಿ.